ಶ್ರೀ ಪಿ.ಜಿ.ಆರ್. ಸಿಂಧ್ಯಾ :– ಈ ವಿಚಾರವನ್ನು ಗೌರವಾನ್ವಿತ ಸದಸ್ಯರು ನನ್ನ ಗಮನಕ್ಕೆ ಈಗಾಗಲೇ ತಂದಿದ್ದಾರೆ. ನಾನು ಗುಲ್ಬರ್ಗಾದ ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ಒಂದು ವರದಿ ಸಲ್ಲಿಸುವುದಕ್ಕೆ ತಿಳಿಸಿದ್ದೇನೆ. ಏಕೆಂದರೆ, ಈಗಾಗಲೇ ಅಲ್ಲೊಂದು ಚಿಕ್ಕ ರೈಲ್ವೆ ಬ್ರಿಡ್ಜ್ ಇದ್ದು, ಟ್ರಾಫಿಕ್ ಜಾಸ್ತಿಯಾಗಿರುವುದರಿಂದ ಬೇರೆ ಕಡೆಯಿಂದ ಸಾಗಲು ಪ್ರಯತ್ನಿಸಲಾಗುತ್ತಿದೆ. ಈಗ ಈ ವಿಷಯದ ಬಗ್ಗೆ ಮಾನ್ಯ ಗೌರವಾನ್ವಿತ ಸದಸ್ಯರು ನನ್ನ ಗಮನಕ್ಕೆ ತಂದಿರುವುದರಿಂದ, ಈ ಕುರಿತು ಖಂಡಿತವಾಗಿಯೂ ಒಂದು alternate ಹುಡುಕುವುದಕ್ಕೆ ಜಿಲ್ಲಾಧಿಕಾರಿಯಿಂದ ಪತ್ರ ಬಂದ ನಂತರ ನಾವು ಹಾಗೂ ಅವರು ಕುಳಿತುಕೊಂಡು ಈ ಸಮಸ್ಯೆಗೆ ಪರಿಹಾರ ಹುಡುಕೋಣ.

ಶ್ರೀ ಎನ್.ಎಚ್. ಶಿವಶಂಕರರೆಡ್ಡಿ
(ಗೈರು ಹಾಜರು)

ಶ್ರೀ ಟಿ.ಹೆಚ್. ಶಿವಶಂಕರಪ್ಪ
(ಗೈರು ಹಾಜರು)

ಅಧ್ಯಕ್ಷರು :– ಮಾನ್ಯ ಶ್ರೀರಾಮರೆಡ್ಡಿಯವರೆ, ನಿಮ್ಮ ಪ್ರಶ್ನೆ ಕಾರ್ಮಿಕ ಇಲಾಖೆಗೆ ವರ್ಗವಾಗಿದೆ. ಮಾನ್ಯ ಕಾರ್ಮಿಕ ಮಂತ್ರಿಗಳ ಉತ್ತರವಿದ್ದ ದಿವಸ ತೆಗೆದುಕೊಳ್ಳಲಾಗುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಈ ವಿಷಯ ಮಾನ್ಯ ಕೈಗಾರಿಕಾ ಸಚಿವರಾದ ಸಿಂಧ್ಯಾ ಅವರಿಗೂ ಸಂಬಂಧಪಡುತ್ತದೆ.

ಅಧ್ಯಕ್ಷರು :– ಈ ಪ್ರಶ್ನೆ ಕಾರ್ಮಿಕ ಇಲಾಖೆಗೆ ವರ್ಗವಾಗಿದೆಯೆಂದು ಇಲ್ಲಿ ಕೊಡಲಾಗಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ :– ಯಾವ ಕಾರಣಕ್ಕಾಗಿ ವರ್ಗವಾಗಿದೆ? ಪ್ರಶ್ನೆ ಕಳುಹಿಸಿರುವುದು ನನಗೇ ಗೊತ್ತಿಲ್ಲ.

ಶ್ರೀ ಹೆಚ್.ಆಂಜನೇಯ :– ಕಾರ್ಖಾನೆ ಮುಚ್ಚಿರುವುದರಿಂದ ಕಾರ್ಮಿಕರು ಬೀದಿಪಾಲಾಗಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಈ ವಿಷಯದ ಬಗ್ಗೆ ಉತ್ತರಿಸಲು ಮಾನ್ಯ ಕೈಗಾರಿಕಾ ಮಂತ್ರಿಗಳು ಸಿದ್ಧವಾಗಿದ್ದಾರೆ.

ಅಧ್ಯಕ್ಷರು:– ಉತ್ತರ ಕೊಡುತ್ತೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯಾ :– ಪ್ರಶ್ನೆಯನ್ನು ಫ್ರೇಮ್ ಮಾಡುವ ಸಂದರ್ಭದಲ್ಲಿ ಮಾನ್ಯ ಗೌರವಾನ್ವಿತ ಸದಸ್ಯರಾದ ಶ್ರೀರಾಮರೆಡ್ಡಿಯವರು...

ಅಧ್ಯಕ್ಷರು :– ಸೋಮವಾರ ಉತ್ತರ ಕೊಡುತ್ತಾರೆ. ಅವರು ನೀಡುವ ಉತ್ತರ ತೃಪ್ತಿಯಾಗದಿದ್ದರೆ, ಬೇಕಾದರೆ...

ಶ್ರೀ ಪಿ.ಜಿ.ಆರ್. ಸಿಂಧ್ಯಾ :– ಈಗ ಅವರು ಕೇಳಿರುವ ಪ್ರಶ್ನೆಗಳು ನನ್ನ ಇಲಾಖೆಗೆ ನೇರವಾಗಿ ಸಂಬಂಧಪಡದಿದ್ದರೂ ಪರೋಕ್ಷವಾಗಿ ಕೈಗಾರಿಕಾ ಇಲಾಖೆಗೆ ಸಂಬಂಧಪಡುವುದು ನಿಜ 'ಇದ್ದಲ್ಲಿ ಈ ಕೈಗಾರಿಕೆಗಳು ಪುನರ್ ಪ್ರಾರಂಭಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?' ಎಂದು ಕೇಳಿರುವುದಕ್ಕೆ ಪುನರ್ ಪ್ರಾರಂಭಿಸುವುದಕ್ಕೆ ಪ್ರತಿ ಕೈಗಾರಿಕೆಗೂ ಏನು ಮಾಡಬೇಕು? ಪ್ರತಿ ಕಾರ್ಖಾನೆ ಬಗೆಯೂ ನಾನು ತಮಗೆ ಉತ್ತರ ಕೊಡಬೇಕಾಗುತ್ತದೆ. ಆದುದರಿಂದ, ನಾನು ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ರವರು ನೀಡಿರುವ ಸಲಹೆಯನ್ನು ಒಪ್ಪಿಕೊಳ್ಳುತ್ತೇನೆ. ಈ ಕೈಗಾರಿಕೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕಾರ್ಮಿಕರೆಲ್ಲರೂ ಬೀದಿಪಾಲಾಗಿರುವುದು ಮತ್ತು ಈ public sector & private sector concept ಬಗ್ಗೆ ಮಾನ್ಯ ಗೌರವಾನ್ವಿತ ಸದಸ್ಯರುಗಳ ಅನುಭವದಿಂದ ನಾವೇನು ತಿದ್ದಿಕೊಳ್ಳಬೇಕು ಮತ್ತು ಸರ್ಕಾರಕ್ಕೆ ಈ ನಿಟ್ಟಿನಲ್ಲಿ ಸಲಹೆ ಕೊಡುವ ದಿಸೆಯಲ್ಲಿ ತಾವು ಚರ್ಚೆಗೆ ಅವಕಾಶವಾಗುವಂತೆ ಅರ್ಧ ಗಂಟೆ ಕಾಲ ಚರ್ಚೆಗೆ ಮೀಸಲಿಟ್ಟರೆ ಸರ್ಕಾರಕ್ಕೆ ಇದರಿಂದ ಅನುಕೂಲವಾಗುತ್ತದೆ.

ಅಧ್ಯಕ್ಷರು :– ಇದರ ಬಗ್ಗೆ ಒಂದು ನೋಟಿಸ್ ಕಳುಹಿಸಿ.

ಡಾ॥ ಕೆ.ಅನ್ನದಾನಿ
(ಗೈರು ಹಾಜರು)

ಶ್ರೀ ಐವಾನ್ ನಿಗ್ಲಿ
(ಗೈರು ಹಾಜರು)

<u>ಸುಳ್ಯ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ : ಪಂಗಡಗಳ ಕುಟುಂಬಗಳಿಗೆ ನೀಡಿರುವ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದು :</u>

284 (3281) ಶ್ರೀ ಅಂಗಾರ್ ಎಸ್. (ಸುಳ್ಯ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಳ ತಾಲ್ಲೂಕಿನ ಅಜ್ಜಾವರ ಗ್ರಾಮದ ದೊಡ್ಡೇರಿಯಲ್ಲಿ ಪರಿಶಿಷ್ಟ ಜಾತಿ : ಪಂಗಡಗಳ ಕುಟುಂಬಗಳಿಗೆ ಒದಗಿಸಲಾದ ಭೂಮಿಗೆ ಕೃಷಿ ಮಾಡಲು ನೀರಾವರಿ ಸೌಲಭ್ಯ ಯಾವಾಗ ಮಂಜೂರು ಮಾಡಲಾಗುವುದು;